ಕೆ.ಎನ್. ಗಣೇಶಯ್ಯ

# ಆರ್ಯವೀರ್ಯ

## ಭಾಗ-3

ಮಾರನೆಯ ದಿನ ಮುಂಜಾನೆ ನಾನು ಎದ್ದಮೇಲೆ, ಹೊರಗೆ ಕರೆದೊಯ್ದು ಒಂದು ಮರದ ಕೆಳಗೆ ಬಂಡೆಯ ಮೇಲೆ ಕೂತು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಅಷ್ಟರಲ್ಲಿ ಅಲ್ಲಿಗೆ ಚಹ ಬಂದಿತ್ತು. ಅಲ್ಲಿನ ವ್ಯವಸ್ಥೆಗಳನ್ನು ಗಮನಿಸಿದ ನನಗೆ ಅನಿಸಿದ್ದು, ಈ ಅಜ್ಜಿಯೆ ಅಲ್ಲಿ ಪ್ರಮುಖ ವ್ಯಕ್ತಿ; ಆಕೆ ಹೇಳಿದ್ದನ್ನು ಎಲ್ಲರೂ ಕೇಳುತ್ತಾರೆ; ಆಕೆಗೆ ಎಲ್ಲರೂ ಗೌರವ ಕೊಟ್ಟು ಶಿರಸಾವಹಿಸಿ ಕೆಲಸ ಮಾಡುತ್ತಾರೆ; ಅವರು ಇಲ್ಲಿ ಯಾವುದೋ ಒಂದು ಮಹತ್ತರ ಕೆಲಸ ನಿರ್ವಹಿಸಲು ಬಂದಿದ್ದಾರೆ ಎಂದು. ಅವರ ಮೇಲೆ ನನಗೆ ಆಗಲೆ ಗೌರವ ಹುಟ್ಟಿತ್ತು. ಚಹ ಕುಡಿಯುತ್ತ ಅಜ್ಜಿ ಹೇಳಿದರು: 'ದಿಂಗ್ಸೆ, ನಾನು ನಿನ್ನ ವಿದ್ಯಾಭ್ಯಾಸಕ್ಕೆ ಮತ್ತು ಜೀವನಕ್ಕೆ ಎಲ್ಲ ವ್ಯವಸ್ಥೆ ಮಾಡಿದ್ದೇನೆ. ಇಲ್ಲಿಗೆ ಸುಮಾರು ಐದು ಕಿ.ಮೀ. ದೂರದಲ್ಲಿ ನಿನ್ನನ್ನು ಒಂದು ಶಾಲೆಗೆ ಸೇರಿಸಲು ವ್ಯವಸ್ಥೆ ಆಗಿದೆ. ಪ್ರತಿದಿನ ನಿಮ್ಮ ಊರಿನಿಂದ ಅಥವಾ ಇಲ್ಲಿಂದ ಒಂದು ವಾಹನದಲ್ಲಿ ಕರೆದೊಯ್ಯುತ್ತಾರೆ. ಎರಡು ಮೂರು ವರ್ಷಗಳಲ್ಲಿ ಇಲ್ಲಿಯೇ ಒಂದು ಶಾಲೆಯೂ ಪ್ರಾರಂಭವಾಗುತ್ತದೆ. ಆಗ ನೀನು ಇಲ್ಲಿಯೇ ಇದ್ದುಕೊಂಡು ಓದಬಹುದು. ಆದರೆ ಅದೆಲ್ಲಕ್ಕೂ ನೀನು ಒಪ್ಪಬೇಕು, ಅಷ್ಟೆ.'

ಅದನ್ನು ಕೇಳಿ, ನನ್ನವರು ಎಂದು ಒಬ್ಬ ಅಜ್ಜಿ ಇದ್ದಾಗ ಜೀವನ ಇಷ್ಟು ಸಲೀಸಾಗುತ್ತದೆ ಎಂಬ ಭಾವನೆ ನನ್ನ ಕಣ್ಣಲ್ಲಿ ನೀರು ಜಿನುಗಿಸಿತ್ತು. ನನ್ನ ಕಣ್ಣಲ್ಲಿ ಹರಿಯುತ್ತಿದ್ದ ನೀರನ್ನು ಕಂಡ ಅಜ್ಜಿ, ಅದರ ಅರ್ಥ ಅರಿಯದೆ ನನ್ನನ್ನು ಬಾಚಿ ತಬ್ಬಿಕೊಂಡು, 'ಅಳಬೇಡ ಕಂದ. ನಿನಗೆ ಇಷ್ಟವಿಲ್ಲದಿದ್ದರೆ ಬೇಡ' ಎಂದಳು. ನಾನು ತಕ್ಷಣ,

'ಇಲ್ಲ ಇಲ್ಲ. ಅಜ್ಜಿ, ನಾನು ಓದುತ್ತೇನೆ. ಖುಷಿಗೆ ಅತ್ತೆ' ಎಂದೆ. ಆಕೆ ತಕ್ಷಣ ನನ್ನನ್ನು ಬಂಧನದಿಂದ ಬಿಡಿಸಿ ನಾನು ಹೇಳಿದ್ದನ್ನು ನಂಬಲಾರದೆ, ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದಳು. ಈಗ ಆಕೆಯ ಕಣ್ಣಲ್ಲಿಯೂ ನೀರು ಸುರಿಯುತ್ತಿತ್ತು. ಮತ್ತೆ ನನ್ನನ್ನು ಸೆಳೆದು ತಬ್ಬಿಕೊಂಡು ಮುಖದ ತುಂಬ ಮುತ್ತಿಟ್ಟಳು. 'ನಿನಗೆ